ಕರೆದಾಗ ಹಿಂದೆ ತನ್ನ ಬಾಲ್ಯದಲಿ ಹೀಗೇ ಎಲ್ಲೋ ಆಟವಾಡುತ್ತ ಕಳೆದುಹೋಗಿರುತ್ತಿದ್ದಾಗ ಕೂಗುತ್ತಿದ್ದ ಅದೇ ಮಾರ್ದವತೆ ತೋರಿತು. ಮನಸು ಬಾಲ್ಯಕೆ ಮರಳುವಾಗ ಎಷ್ಟೊಂದು ಮಗುವಿನಂತಿರುತ್ತದೆ. ಒಂದು ಕ್ಷಣ ನಡೆದಿದ್ದೆಲ್ಲವೂ ಸುಳ್ಳಾಗಿ ಈ ಇದೊಂದೇ ಗಳಿಗೆ ಸತ್ಯವಾಗಿರುತ್ತಿದ್ದರೆ, ಇಲ್ಲೇ ಎಲ್ಲೋ ಹಿತ್ತಿಲ್ಲಲ್ಲಿ ಸರಸ್ವತಿ ಊಟಕ್ಕೆ ಎಲೆ ಹರಿಯುತ್ತಿರುತ್ತಿದ್ದರೆ... ಬದುಕಿನ ಈ ಇಪ್ಪತ್ತು ವರ್ಷಗಳನ್ನೂ ಅವಳ ನೆನಪಿನಲ್ಲೇ ಕಳೆದಿದ್ದೇನೆ... ಸರಸ್ವತಿಯೊಂದಿಗಿನ ಬದುಕಾದರೂ ಇಂದು ನಿನ್ನೆಯದಲ್ಲವಲ್ಲ... ಸರಿಯಾಗಿ ಇಪ್ಪತ್ತು ವರ್ಷಗಳನ್ನು ಒಟ್ಟಿಗೆ ಕೂಡಿಯಾಡಿ ಬದುಕಿದ್ದೇವೆ. ಬದುಕಿನ ಸುವರ್ಣ ಪರ್ವಕಾಲದಲಿ ಎಂತಹುದೋ ಒಂದು ಅನೂಹ್ಯ ಆಭಾಸಕರ ಸನ್ನಿವೇಶದಲ್ಲಿ ನಾವು ಹೇಗೆ ಬೇರ್ಪಟ್ಟುಬಿಟ್ಟೆವಲ್ಲ! ಎಂದಿಗಾದರೂ ಕನಸಿಗೂ, ಸುಮ್ಮನೆ ಬೇಡದ ಕಲ್ಪನೆಗೂ ನಿಲುಕದ ಬೇರ್ಪಡುವಿಕೆಯದು. ಎಲ್ಲ ನಡೆದುಹೋಯ್ತು... ಕನಸಿನಂತೆ.

'ಪುಟ್ಟು ಬಾರೋ...'

ಅತ್ತೆ ಮತ್ತೆ ಕೂಗು ಹಾಕಿದ್ದರು. ಎಲೆಯ ಬದಲಿಗೆ ಪಿಂಗಾಣಿಯ ತಟ್ಟೆ ಲೋಟಗಳು, ಊಟಕ್ಕೊಂದು ಕೋಣೆ ತೆಗೆಸಿದ್ದರು. ಅಲ್ಲಿಯೂ ನಿಚ್ಚಳ ಗಾಳಿಬೆಳಕಿತ್ತು. ಅಲ್ಲಿಗೊಂದು ಚಂದದ ಮೇಜು, ಮೇಜಿನ ಮೇಲೆ ಹಳದೀ ಹೂಗಳ ಹೂದಾನಿ, ಮನೆಯೊಳಗೆ ಅಲ್ಲಲ್ಲಿ ಹೂಕುಂಡಗಳು... ನೆಲಕ್ಕೆ ಮಾತ್ರ ಕೆಂಪುಹಾಸನ್ನೇ ಹೊರಿಸಿದ್ದಾರೆ. ಈ ಹೊಸಕೋಣೆ ಕೂಡ ಮನೆಯ ಹಳೆಯ ಘಮಲನ್ನೇ ಒಳಕ್ಕೆಳೆದುಕೊಂಡಿದೆ.

ನಾನೊಬ್ಬನೇ ಕುಳಿತೆ. ದಿನೇಶ ಅಲ್ಲೇ ಇದ್ದರೂ ಕೂರಲಿಲ್ಲ. 'ಬಾರೋ' ಅಂದೆ. ಆದರೆ, ನನ್ನ ದನಿ ಎಂದಿನಂತಿಲ್ಲದೆ ಹೊಸತಾಗಿ ಕೇಳಿತು.

'ಇರ್ಲಿ', ಅವನ ಉತ್ತರ ಎಷ್ಟು ಕ್ಲುಪ್ತ!

ಬಿಟ್ಟುಹೋದವರನ್ನು ಮರೆಯುವುದು ಮೊದಮೊದಲಿಗೆ ಬಹಳವೇ ಕಷ್ಟ. ಆದರೆ, ಒಂದಷ್ಟು ವರ್ಷಗಳ ಬಳಿಕ, ಅವರ ಬರುವಿಕೆಯನ್ನು ಎದುರು ನೋಡದೇ ಇರುವಾಗ ಅವರೇನಾದರೂ ಮರಳಿ ಬಂದುಬಿಟ್ಟರೆ ಒಳಗಿಳಿಸಿಕೊಳ್ಳುವುದು ಅದಕ್ಕಿಂತಲೂ ಕಷ್ಟ.

ಅತ್ತೆ ಊಟಕ್ಕೆ ಬಡಿಸಿದಾಗ ಸುಮ್ಮನೆ ಅನ್ನದಲ್ಲಿ ಬೆರಳಾಡಿಸಿದೆ. ಅದೇಕೋ ತುತ್ತೆತ್ತಿ ಬಾಯಿಗಿಟ್ಟುಕೊಳ್ಳುವುದು ಜಗತ್ತಿನಲ್ಲಿ ಅತ್ಯಂತ ಪ್ರಯಾಸಕರ ವಿಷಯವೆಂದು ಆ ಕ್ಷಣದಲ್ಲಿ ನನಗನ್ನಿಸಿತು. ಅದಕ್ಕೆ ತಕ್ಕಂತೆ ಮತ್ತೊಂದು ಅನಿರೀಕ್ಷಿತ ಸನ್ನಿವೇಶವೂ ಎದುರಾಗಿತ್ತು.

'ಪುಟ್ಟು, ಹೊನ್ನಿ ಬಂದೌಳೆ. ವರ್ಗ ತಿಟ್ಟೆ ಮ್ಯಾಲೆ ಕುಂತೌಳೆ. ಅದೇನೋ ನಿಂಜೊತೆ ಮಾತಾಡ್ಬೇಕಂತೆ, ನೋಡು'. ನಾನಿನ್ನೂ ಊಟಕ್ಕೆ ಮೊದಲು ಮಾಡಬೇಕು, ಆಗ ಅತ್ತೆ ಪಿಸುಗುಟ್ಟಿದಂತೆ ನಿಧಾನಕೆ ಹೇಳಿದ್ದಳು.

ಆ ಕ್ಷಣ ನನ್ನ ಹೃದಯ ಹಿಂಡಿ, ಒಂದೆರಡು ಗತಿ ತಪ್ಪಿಸಿಕೊಂಡು ತಡವರಿಸಿತು.

ಅತ್ತೆ ಅದೆಷ್ಟೇ ಮೆಲ್ಲಗೆ ಹೇಳಿದ್ದರೂ, ದಿನೇಶನ ಕಿವಿಗೆ ಬಿದ್ದಿರಬೇಕು, ಅವನು ಕೂತಲ್ಲೇ ಸಿಡುಕಿದ್ದ. 'ಎಲ್ಲ ಬಿಟ್ಟು ಅವುಳೆಂತುಕ್ಕೀಗ ಇಲ್ಗೆ ಬಂದ್ದು? ಆಗಿದ್ದೆಲ್ಲ ಸಾಲ್ದಾ? ಪೋಗಕ್ಕೇಳು ಎದ್ದು'.

'ಯೇ, ಸುಮ್ನಿರು, ಆಗಿದ್ದೇ ಆಡ್ಕಂದು ಅದಿನ್ನೇಟೊರ್ಸ ಕಳ್ದೀರಿ ನೀವೆಲ್ಲ? ಇರ ಒಂದು ಬೊದ್ಕಲ್ಲಿ', ಅತ್ತೆ ಗದರಿದ್ದಳು.

'ಇವ್ಳಿಂದಾಗಿ ಜೀವಾನ್ನೇ ಕಳ್ಕಂಡನಲ್ಲ ಮಾಂವ? ಈಗೇನ್ ಇವ್ಳು ಮಾತಾಡುದ್ರೆ ವಾಪಸ್ ಬಂದ್ಬುಟ್ತಾನ? ಸುಮ್ನೆ ಏನಾರೊಂದು ಅನ್ಕಂಡು! ಥತ್ ಸಾಯ್ರಿ ಏನಾರ ಮಾಡ್ಕಂಡು' ಎಂದು ದಿನೇಶ ಕೂತಲ್ಲಿಂದ ದಡಕ್ಕನೆ ಎದ್ದು ಹೋಗಿದ್ದ.

'ಅವ್ನು ಅಂಗೇ ಬುಡು ಪುಟ್ಟು, ಎಲ್ಲ ಅವ್ರು ಮಾವುನಂಗೆ. ಕಾಲಲ್ಲಿ ಬಿಸ್ನೀರು ಉಯ್ಕೊಂಡೋನಂಗೇನೇ ಆಡೋದು ಯಾವಾಗ್ಲೂನ್ವೆ. ಅವೊತ್ತು ನಿಮ್ಮಪ್ಪ ಒಂಚೂರು ತಡ್ಕಂಡಿದ್ದಿದ್ರೆ ಆಯ್ತಿರ್ನಿಲ್ವಾ? ಅದೇನದು, ಆ ಪಾಟಿ ಕ್ಯಾಣ? ನೀ ಮದ್ಲು ಉಣ್ಣಪ್ಪ, ತಲೆ ಕೆಡಿಸ್ಕಬೇಡ, ಉಂಡ್ಮೇಕೆ ಮಾತಾಡುದ್ರಾಯ್ತು...'

ಅತ್ತೆ ಹಾಗನ್ನುತ್ತಾ ಅಡುಗೆ ಮನೆಗೆ ಹೋದರೆ ಅಲ್ಲಿ ಸೊಸೆ, 'ಅಲ್ಲತ್ತೆ, ಊಟಕ್ಕೆ ಕೂತೊತ್ತಲ್ಲೇ ಹೇಳ್ಬೇಕಿತ್ತಾ?' ಎಂದು ಮುನಿಸು ತೋರಿದ್ದಳು.

ಅವಳು ಹೇಳಿದ್ದು ನಿಜವೂ ಆಗಿತ್ತು. ಮೊದಲೇ ಅರ್ಥವಾಗದ ಒಳಗುದಿಯಲ್ಲಿ ಬೇಯುತ್ತಿದ್ದವನಿಗೆ ಇದನ್ನು ಊಟದ ಹೊತ್ತಿನಲ್ಲಿ ಹೇಳಿರಬಾರದಿತ್ತು. ಇದೇ ಇಪ್ಪತ್ತು ವರ್ಷಗಳ ಹಿಂದೆ, ಇಂಥದ್ದೇ ಒಂದು